ಶ್ರೀ ಬಿ. ಪಿ. ಗಂಗಾಧರ್.—ಇನ್ನೆಷ್ಟು ವರ್ಷಗಳಲ್ಲಿ ಸರ್ಕಾರದವರು ಈ ಕೆಲಸವನ್ನು ಮುಗಿಸಬೇಕೆಂದಿದ್ದಾರೆ ?

Sri R. M. PATIL.—The entire scheme will have to be taken up.

ಶ್ರೀ ಬಿ. ಪಿ. ಗಂಗಾಧರ್.—ಇದನ್ನು ಮುಗಿಸಲು ಒಂದು ಕಾಲ ನಿಗದಿಯನ್ನು ಮಾಡಲು ಸಾಧ್ಯವಿಲ್ಲವೇ ?

Sri R. M. PATIL.—It depends upon the availability of funds. Any way this year it will be finalised.

Providing of Electricity to Viliages and wells in Muddebihal Taluk

385. Sri S. M. GUREDDI (Muddebihal).—

Will the Minister for Public Works be pleased to state :—

(*a*) the number of villages and wells in Muddebihal Taluk in respect of which the Mysore Electricity Board had a scheme for providing electricity during 1967-68 ;

(*b*) the number of villages and wells to which electricity has been provided so far ?

A.—Sri VEERENDRA PATIL (Minister for Public Works).—

(*a*) (i) 5 Villages.

(ii) 25 Wells.

(*b*) Two villages are electrified.

ಶ್ರೀ ಎಸ್. ಎಂ. ಗುರೆಡ್ಡಿ.—ವಿದ್ಯುಚ್ಛಕ್ತಿ ಮಂಡಲಯವರ ಯೋಜನೆಯಲ್ಲಿ 5 ಗ್ರಾಮಗಳು ಮತ್ತು 25 ಬಾವಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಕಾರ್ಯಕ್ರಮ ಇದ್ದರೂ ಕೇವಲ ಎರಡು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸರಾಗಿದೆ ಎಂದಿದೆ. ಆ ಗ್ರಾಮಗಳು ಯಾವುವು ಮತ್ತು ಭಾವಿಗಳಿಗೆ ಒದಗಿಸದೆ ಇರುವುದಕ್ಕೆ ಕಾರಣವೇನು ?

†ಶ್ರೀ ವೀರೇಂದ್ರಪಾಟೀಲ್.—ಮುದ್ದೆಬಿಹಾಳ್ ಮತ್ತು ತಾಳಿಕೋಟೆ.

ಶ್ರೀ ಎಸ್. ಎಂ. ಗುರೆಡ್ಡಿ.—5 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕ ಯೋಜನೆಯಿದ್ದರೂ—1966ರಲ್ಲಿ ಒಂದೂರಿಗೂ ಮತ್ತು 1967ರಲ್ಲಿ ಒಂದೂರಿಗೂ ವಿದ್ಯುಚ್ಛಕ್ತಿಯನ್ನು ಒದಗಿಸರಾಗಿದೆ. 5 ಗ್ರಾಮಗಳಿಗೂ ಒದಗಿಸಲು ಇದ್ದ ತೊಂದರೆ ಏನು ?

ಶ್ರೀ ವೀರೇಂದ್ರಪಾಟೀಲ್.—5 ಗ್ರಾಮಗಳಿಗೆ ಒದಗಿಸಬೇಕೆಂಬ ಯೋಜನೆಯನ್ನು ಹಾಕಿಕೊಂಡರು. ಆದರೆ ಅವರಲ್ಲಿ ಅದಕ್ಕೆ ಹಣದ ಅಭಾವ ಬಂದುದರಿಂದ ಎರಡೂ ಗ್ರಾಮಗಳಿಗೂ ಮುಗಿಸಲಕ್ಕೆ ಆಗಲಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ.—ವಿದ್ಯುಚ್ಛಕ್ತಿ ಮಂಡಲಯವರು ಇಂತಿಷ್ಟು ಗ್ರಾಮಗಳಿಗೆ ಇಂತಿಷ್ಟು ಅವಧಿಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂಬ ಯೋಜನೆಯನ್ನು ಅವರೇ ತಯಾರು ಮಾಡಿಕೊಳ್ಳುತ್ತಾರೋ ಅಥವಾ ಸರ್ಕಾರದವರೇನಾದರೂ ಒಂದು ಡೈರೆಕ್ಷನ್ನನ್ನು ಕೊಡುತ್ತಾರೋ ಅಥವಾ ಆಯಾಯ ಸ್ಥಳದ ಪರಿಸ್ಥಿತಿ ನೋಡಿಕೊಂಡು ಆ ಕೆಲಸಗಳನ್ನು ಮಾಡಲು ಅಲ್ಲಿನ ತಾಲ್ಲೂಕ್ ಬೋರ್ಡಿನವರು ಅಥವಾ ಡಿಸ್ಟ್ರಿಕ್ಟ್‌ಡೆವಲಪ್‌ಮೆಂಟ್ ಬೋರ್ಡಿನವರೇನಾದರೂ ಸಲಹೆಗಳನ್ನು ನೀಡುತ್ತಾರೋ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆಲ್ಲಾ ಕಾನೂನು ರೂಲ್ ಮತ್ತು ಪ್ರೊಸೀಜರುಗಳಿವೆ. ಅಲ್ಲಿ ಇದುವರೆಗೆ ಎಷ್ಟು ಪರ್ಸೆಂಟ್ ಎಲೆಕ್ಟ್ರಿಫೈ ಮಾಡಲಾಗಿದೆ, ಮತ್ತು ಆ ಗ್ರಾಮಗಳು ಮೇನ್ ಕೆ. ಎ. ಲೈನಿಗೆ ಹತ್ತಿರವಿದ್ದಲ್ಲಿವೆಯೋ ಅಥವಾ ದೂರದಲ್ಲಿವೆಯೋ ಅದನ್ನೂ ನೋಡಿಕೊಂಡು ಕೆಲಸ ಮಾಡುತ್ತಾರೆ. ಅಲ್ಲದೆ ಪಂಚಾಯಿತಿಯವರು ಒಂದು ರೆಸಲ್ಯೂಷನ್ ಸಹಾ ಮಾಡಬೇಕಾಗಿರುತ್ತದೆ. ಇಷ್ಟೆಲ್ಲವನ್ನೂ ಅನುಸರಿಸಿ ಕೆಲಸ ಮಾಡುತ್ತಾರೆ.

ಶ್ರೀ ಎಂ. ರಾಮಣ್ಣ.—ಎಂ. ಎಸ್. ಐ. ಬಿ. ಅವರು ಪ್ರತಿ ವರ್ಷದಲ್ಲೂ ಒಂದು—ಎರಡು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಾ ಹೋದರೆ ನೂರಾರು ವರ್ಷಗಳಾದರೂ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸಿಕ್ಕಲಾರದು ಅನ್ನುವುದು ಸರ್ಕಾರವವರ ಗಮನಕ್ಕೆ ಬಂದಿದೆಯೆ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆಲ್ಲಾ ಹೆಚ್ಚಿನ ಹಣ ಬೇಕು. ಆದರೆ ಅವರಲ್ಲಿ ಹಣದ ಅಭಾವ ಜಾಸ್ತಿಯಾಗಿದೆ. ಈ ಹಿಂದೆ ಅವರಿಗೆ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಇಷ್ಟಿಷ್ಟು ಎಂದು ಹಣವನ್ನು ಕೊಡುತ್ತಿದ್ದರು. ಈಗ ರಾಜ್ಯ ಸರ್ಕಾರದವರೇನೂ ಹಣವನ್ನು ಕೊಡುತ್ತಿಲ್ಲ. ಇನ್ನು ಮುಂದೆ ಎಲೆಕ್ಟ್ರಿಸಿಟಿ ಬೋರ್ಡಿನವರೇ ತಮ್ಮಲ್ಲಿರತಕ್ಕ ಹಣದ ಆಧಾರದ ಮೇಲೆ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಬೇಕೆಂದು ಹೇಳಿದ್ದೇವೆ. ಆದ್ದರಿಂದ ಅವರು ಎಷ್ಟೆಷ್ಟು ಹಣ ಒದಗುತ್ತದೋ ಅಷ್ಟಷ್ಟು ಕೆಲಸ ಮಾಡಿಕೊಂಡು ಬರುತ್ತಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಬಿಜಾಪುರ ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಕಾರ್ಯ ಬಹಳ ನಿಧಾನವಾಗಿ ನಡೆಯುತ್ತಿದೆ. ಈಗ ರಾಯಚೂರು ಜಿಲ್ಲೆ, ಬೀದರ್ ಜಿಲ್ಲೆ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಸಂಬಂಧಪಟ್ಟಹಾಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ವಿಷಯದಲ್ಲಿ ಒಂದು ಮಾಸ್ಟರ್ ಪ್ಲಾನನ್ನು ವಿದ್ಯುಚ್ಛಕ್ತಿ ಬೋರ್ಡಿನವರು ತಯಾರು ಮಾಡಿದ್ದಾರೆಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ, ಅದೇರೀತಿ ಬಿಜಾಪುರ ಜಿಲ್ಲೆಗೂ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿ ಪ್ರತಿವರ್ಷವೂ ಕನಿಷ್ಟ ಪಕ್ಷ ನೂರಾರು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಆ ಯೋಜನೆಯಲ್ಲಿ ಅಳವಡಿಸುವುದಕ್ಕೆ ಸಾಧ್ಯವಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಅದು ಮಾಸ್ಟರ್ ಪ್ಲಾನ್ ಎನ್ನುವುದು ಹೆಸರು ಬಹಳ ದೊಡ್ಡದು, ಅಷ್ಟೆ. ಆ ಕೆಲಸಗಳನ್ನು ಮಾಡುವುದಕ್ಕೆ ಶಕ್ತಿ ಇಲ್ಲದೆ ಇರುವಾಗ ಮಾಸ್ಟರ್ ಪ್ಲಾನ್ ಮಾಡುವುದರಲ್ಲಿ ಅರ್ಥವಿಲ್ಲ. ಮಾಸ್ಟರ್ ಪ್ಲಾನು ಮಾಡುವುದಾದರೆ ಬೀದರ್ ಜಿಲ್ಲೆಗೂ ಮಾಡಬಹುದು, ಎರಾ್ಲ ಜಿಲ್ಲೆಗಳಿಗೂ ಬೇಕಾದರೆ ಮಾಡಬಹುದು. ಆದರೆ ಅದನ್ನು ಕಾರ್ಯಗತ ಮಾಡುವುದಕ್ಕೆ ದುಡ್ಡಿನ ಪ್ರಶ್ನೆ ಬರುತ್ತದೆ. ಈಗಾಗಲೇ ಎಲೆಕ್ಟ್ರಿಸಿಟಿ ಬೋರ್ಡಿನವರು ನಮ್ಮ ರಾಜ್ಯದಲ್ಲಿರುವಂತಹ ಎರಾ್ಲ ಹಳ್ಳಿಗಳಿಗೂ ಬಾವಿಗಳಿಗೆ ಮತ್ತು ಪಂಪುಸೆಟ್ಟುಗಳಿಗೆ ಮನೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಸಲುವಾಗಿ 95 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ಎಂದು ಒಂದು ರಫ್ ಎಸ್ಟಿಮೇಟನ್ನು ತಯಾರು ಮಾಡಿದ್ದಾರೆ. ಮಾಸ್ಟರ್ ಪ್ಲಾನನ್ನು ಮಾಡಿದ ತಕ್ಷಣ ಹಣಬೇಕು. ಹಣ ಇಲ್ಲದೆ ಮಾಸ್ಟರ್ ಪ್ಲಾನನ್ನು ಮಾಡಿ ಏನು ಪ್ರಯೋಜನ?

ಉಪಾಧ್ಯಕ್ಷರು.—488ನೆಯ ಪ್ರಶ್ನೆಗೆ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಇಲ್ಲದೆ ಇರುವುದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Main Canal of Tungabhadra Project

388. Sri M. NAGAPPA (Raichur).—

Will the Minister for Public Works be pleased to state :—

(*a*) whether according to the original plan the main canal (Left Bank) of Tungabhadra Project was to cover the northern and many of eastern villages of the Raichur Taluk ;

(*b*) if so, the reason for changing the scheme and when this was done